ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೮

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೇ ಅಧಿವೇಶನ

## ಬುಧವಾರ, ದಿನಾಂಕ: ೨ನೇ ಜುಲೈ, ೨೦೧೪

---

### ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

### ಪ್ಲಾಸ್ಟಿಕ್ ಕೈಚೀಲಗಳ ಬಳಕೆಯಿಂದ ಪರಿಸರ ಮಾಲಿನ್ಯ

**ಡಾ: ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)** --

೧೦೬ (೫೪೭) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಾವುದೇ ನಿಯಂತ್ರಣವಿಲ್ಲದೆ ೪೦ ಮೈಕ್ರಾನ್‌ಗಿಂತ ಕಡಿಮೆ ದರ್ಜೆ ಪ್ಲಾಸ್ಟಿಕ್ ಕೈಚೀಲಗಳ ಉತ್ಪಾದನೆ ಮಾರಾಟ ಮತ್ತು ಬಳಕೆಯಿಂದಾಗಿ ಗರಿಷ್ಟ ಮಟ್ಟದ ಮಾಲಿನ್ಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ೪೦ ಮೈಕ್ರಾನ್‌ಗಿಂತ ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್ ಉತ್ಪಾದನೆಯಾಗದಂತೆ ಫ್ಯಾಕ್ಟರಿಗಳನ್ನು ಮುಚ್ಚಲು ಮತ್ತು ಮಾರಾಟಗಾರರನ್ನು

ಶಿಕ್ಷಿಸಲು ಸರ್ಕಾರವು ಈಗಲಾದರೂ ಕಠಿಣ ಕಾನೂನು ಕ್ರಮಗಳನ್ನು ಜರುಗಿಸುವುದೇ ;

(ಇ) ಅದೇ ರೀತಿಯಲ್ಲಿ ಫ್ಲೆಕ್ಸ್ ಹಾವಳಿ ನಿಯಂತ್ರಿಸಲಾಗುವುದೇ ?

## ಪ್ರಕೃತಿ ವಿಕೋಪ ಪರಿಹಾರದ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೭ (೪೮೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಗೆ ಪ್ರಕೃತಿ ವಿಕೋಪದಡಿ ಬಂದ ಹಣವೆಷ್ಟು ;

(ಆ) ಇದರಲ್ಲಿ ಮೂಡಿಗೆರೆ ತಾಲ್ಲೂಕಿಗೆ ಬಿಡುಗಡೆಯಾಗಿರುವ ಮೊತ್ತವೆಷ್ಟು ;

(ಇ) ಮಂಜೂರಾಗಿದ್ದಲ್ಲಿ, ಇದುವರೆವಿಗೂ ಸದರಿ ಕಾಮಗಾರಿ ಕೈಗೊಂಡಿಲ್ಲವೇಕೆ ?

## ಕರ್ನಾಟಕ ಭೂ ಸುಧಾರಣಾ ಕಾಯಿದೆ

## ಕಲಂ ೭೯(ಎ) ಮತ್ತು (ಬಿ) ಬಗ್ಗೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) –**

೧೦೮ (೪೮೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯಾದ್ಯಂತ ಕೃಷಿ ಭೂಮಿಯ ಉಪನೋಂದಣಾಧಿಕಾರಿ ಕಛೇರಿಯ ಪ್ರತಿ ಎಕರೆಗೆ ಮಾರ್ಗದರ್ಶಿ ಬೆಲೆಯ ಕನಿಷ್ಠ ಮತ್ತು ಗರಿಷ್ಠ ಬೆಲೆಯ ವಿವರಗಳನ್ನು ಜಿಲ್ಲಾವಾರು ವಿವರ ನೀಡುವುದು ;

(ಆ) ಕರ್ನಾಟಕ ರಾಜ್ಯಾದ್ಯಂತ ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ ೭೯ (ಎ) ಮತ್ತು (ಬಿ)ಗಳ ಉಲ್ಲಂಘನೆಯ ಎಷ್ಟು ಪ್ರಕರಣಗಳಲ್ಲಿ ನೋಟಿಸ್ ನೀಡಲಾಗಿದೆ; ಜಿಲ್ಲಾವಾರು ವಿವರ ನೀಡುವುದು ;

(ಇ) ಈ ರೀತಿ ನೋಟಿಸ್ ನೀಡಲಾದ ಎಷ್ಟು ಪ್ರಕರಣಗಳು ಈ ಎರಡು ವರ್ಷಗಳಲ್ಲಿ ಇತ್ಯರ್ಥವಾಗಿವೆ ; ಎಷ್ಟು ಪ್ರಕರಣಗಳಲ್ಲಿ ಈ ಕಲಂಗಳ ಉಲ್ಲಂಘನೆ ಸಾಬೀತಾಗಿದೆ ; ಉಳಿದಂತೆ ಎಷ್ಟು ಪ್ರಕರಣಗಳಲ್ಲಿ ಭೂಮಿ ಖರೀದಿ ವಿವರಣೆಯನ್ನು ಒಪ್ಪಿಕೊಂಡು ಖಾತಾ ಮಾಡಿಕೊಡಲು ಆದೇಶ ನೀಡಲಾಯಿತು. ತೀರ್ಮಾನವಾಗದೇ ಉಳಿದಿರುವ ಪ್ರಕರಣಗಳು ಎಷ್ಟು ; ಎಲ್ಲ ವಿವರಗಳನ್ನು ಜಿಲ್ಲಾವಾರು ನೀಡುವುದು ;

ಈ) ಈ ಅಧಿನಿಯಮದಂತೆ ಹಾಲಿ ಇರುವ ಕೃಷಿಯೇತರ ವರಮಾನದ ಮಿತಿಯನ್ನು ಹೆಚ್ಚಿಸುವ ಇಲ್ಲವೇ ಮಿತಿಯನ್ನು ತೆಗೆದುಹಾಕುವ ಯೋಚನೆ ಸರ್ಕಾರದ ಮುಂದಿದೆಯೇ ?

## ರಾಜ್ಯದಲ್ಲಿರುವ ಸಾಕಾನೆ ಮತ್ತು ಮಾವುತರಿಗೆ ಸೌಲಭ್ಯಗಳನ್ನು ನೀಡುವ ಕುರಿತು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೯ (೪೭೭) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಯಾವ ಕಾಡು ಪ್ರದೇಶ ಭಾಗದಲ್ಲಿ ಸರ್ಕಾರದ ವೆಚ್ಚದಲ್ಲಿ ಆನೆಗಳನ್ನು ಸಾಕಲಾಗುತ್ತಿದೆ ; ಹಾಗೂ ಇವುಗಳ ಯೋಗಕ್ಷೇಮಕ್ಕಾಗಿ ಇರುವ ಮಾವುತರ ಸಂಖ್ಯೆ ಮತ್ತು ತಲಾ ಒಂದು ಆನೆ ಸಾಕಾಣೆಗೆ ತಗುಲುತ್ತಿರುವ ವೆಚ್ಚ ಎಷ್ಟು ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಸಾಕಾಣಿಕೆಯ ಆನೆಗಳ ಸಂಖ್ಯೆಗೂ ಮತ್ತು ಅವುಗಳ ಮೇಲ್ವಿಚಾರಣೆಗೆ ಇರುವ ಮಾವುತರ ಸಂಖ್ಯೆಯು ಬಹಳ ಕಡಿಮೆಯಿರುವ ಬಗ್ಗೆ ಸರ್ಕಾರವು ಗಂಭೀರವಾಗಿ ಚಿಂತಿಸಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಏನು ;

(ಇ) ಪ್ರತಿ ದಸರಾ ಸಮಯದಲ್ಲಿ ಮಾವುತರು ತಮ್ಮ ಸೌಲಭ್ಯಗಳ ಕುರಿತು ಕೋರಿರುವ ಬೇಡಿಕೆಗಳ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳ ಮಾಹಿತಿ ಒದಗಿಸುವುದು ?

## ರೈತರ ಸಾಗುವಳಿ ಜಮೀನಿನ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು )** –

೧೧೦ (೪೮೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ರೈತರು ತಾವು ಸಾಗುವಳಿ ಮಾಡುತ್ತಿರುವ ಜಮೀನಿಗೆ ಹಕ್ಕು ಪತ್ರ ಕೊಡುವಂತೆ ಕೋರಿ ಸಲ್ಲಿಸಿರುವ ಅರ್ಜಿಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈವರೆವಿಗೂ ನೀಡಿರುವ ಹಕ್ಕು ಪತ್ರಗಳೆಷ್ಟು ;

(ಇ) ಹಕ್ಕು ಪತ್ರ ನೀಡಲು ಇರುವ ತೊಂದರೆಗಳೇನು ?

## ಕೊಪ್ಪಳ ಜಿಲ್ಲೆಯಲ್ಲಿರುವ ಕ್ರೀಡಾಂಗಣಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ )** –

೧೧೧ (೫೪೩) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಪ್ಪಳ ಜಿಲ್ಲೆಯಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಕ್ರೀಡಾಂಗಣಗಳು ಸದ್ಯ ಸುಸ್ಥಿತಿಯಲ್ಲಿವೆಯೇ ;

(ಇ) ಸದರಿ ಕ್ರೀಡಾಂಗಣಗಳ ನಿರ್ಮಾಣಕ್ಕೆ ಸರ್ಕಾರ ನೀಡಿದ ಅನುದಾನ ಎಷ್ಟು ;

ಈ) ಸದರಿ ಕ್ರೀಡಾಂಗಣಗಳ ಕಾಮಗಾರಿಯನ್ನು ಯಾವ ಏಜೆನ್ಸಿಯವರು ನಿರ್ವಹಿಸಿದ್ದಾರೆ ;

ಉ) ಪ್ರತಿ ವರ್ಷ ಸದರಿ ಕ್ರೀಡಾಂಗಣಗಳಿಗೆ ನೀಡಲಾಗುತ್ತಿರುವ ನಿರ್ವಹಣಾ ಅನುದಾನ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

ಊ) ಇಲಾಖೆಯವರು ಸದರಿ ಅನುದಾನವನ್ನು ಸದ್ಬಳಕೆ ಮಾಡಿಕೊಂಡಿರುವರೇ ?

## ೯೪ಸಿ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಗಳ ಮಂಜೂರಾತಿ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೨ (೫೦೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೯೪ಸಿ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಇತ್ಯರ್ಥಪಡಿಸಲು ಸಮಿತಿಗಳನ್ನು ರಚಿಸಲಾಗಿದೆಯೇ ; ಮತ್ತು ಈ ಸಮಿತಿಗಳನ್ನು ರಚಿಸುವಾಗ ಅನುಸರಿಸಲಾದ ಮಾನದಂಡವೇನು ?

(ಆ) ೯೪ಸಿ ಅಡಿಯಲ್ಲಿ ವಾಣಿಜ್ಯ ಕಟ್ಟಡಗಳಲ್ಲಿ ವಾಸ್ತವ್ಯವಿರುವ ಕುಟುಂಬಗಳಿಗೆ ಮಂಜೂರಾತಿ ನೀಡಲಾಗುವುದೇ ; ಇಲ್ಲವಾದಲ್ಲಿ ಕಾರಣವೇನು ;

(ಇ) ೯೪ಸಿ ಅಡಿಯಲ್ಲಿ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದವರಿಗೆ ರಸ್ತೆ ಮಾರ್ಜಿನ್‌ನ ಮಿತಿ ಎಷ್ಟು ? (ಪಿ.ಡಬ್ಲ್ಯೂ.ಡಿ. ರಸ್ತೆ, ಜಿಲ್ಲಾ ಪಂಚಾಯತ್ ರಸ್ತೆ ಮತ್ತು ಗ್ರಾಮ ಪಂಚಾಯತ್ ರಸ್ತೆಗಳಿಗೆ ನಿಗದಿಪಡಿಸಿದ ಮಿತಿಯೊಂದಿಗೆ ವಿವರ ನೀಡುವುದು)

## ಕೃಷ್ಣಾ ನ್ಯಾಯಾಧಿಕರಣ ಮತ್ತು ವಿದ್ಯುತ್ ಉತ್ಪಾದನೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೩ (೫೫೫) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷ್ಣಾ ನ್ಯಾಯಾಧಿಕರಣ ತೀರ್ಪಿನಿಂದ ಸ್ಕೀಂ 'ಬಿ' ಅಡಿಯಲ್ಲಿ ಎಷ್ಟು ಟಿ.ಎಂ.ಸಿ. ನೀರು ರಾಜ್ಯಕ್ಕೆ ಲಭ್ಯವಾಗಲಿದೆ ;

(ಆ) ಸ್ಕೀಂ 'ಬಿ' ವ್ಯಾಪ್ತಿಗೆ ಬರುವ ಏತ ನೀರಾವರಿ ಯೋಜನೆಗಳು ಯಾವುವು ಮತ್ತು ಈ ವ್ಯಾಪ್ತಿಯಲ್ಲಿ ಬರುವ ನೀರಾವರಿ ಪ್ರದೇಶಗಳೆಷ್ಟು ;

(ಇ) ಇದರಿಂದ ಮುಳುಗಡೆಯಾಗುವ ಭೂಮಿಯ ವಿಸ್ತೀರ್ಣವೆಷ್ಟು ;

ಈ) ಪುನರ್ವಸತಿಗಾಗಿ ಎಷ್ಟು ಭೂಮಿ ಬೇಕೆಂದು ಅಂದಾಜಿಸಲಾಗಿದೆ ;

ಉ) ಈಗಿರುವ ವಿದ್ಯುತ್ ಉತ್ಪಾದನೆ ಎಷ್ಟು ; ಈ ಉತ್ಪಾದನೆಯು ಹೆಚ್ಚಾಗುವ ಸಾಧ್ಯತೆ ಇದೆಯೇ ; ಎಷ್ಟು ಹೆಚ್ಚಾಗಬಹುದು ?

## ಹೈದ್ರಾಬಾದ್ ಕರ್ನಾಟಕ ಭಾಗದ ಪ್ರದೇಶ

## ಅಭಿವೃದ್ಧಿಗಾಗಿ ಕೈಗೊಂಡ ಕ್ರಮ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ** (ವಿಧಾನಸಭೆಯಿಂದ ಚುನಾಯಿತರಾದವರು) –

೧೧೪ (೫೦೫) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೬ ವರ್ಷಗಳಿಂದ ಹೈದ್ರಾಬಾದ್ ಕರ್ನಾಟಕ–ಭಾಗದ ಪ್ರದೇಶದ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಅನುದಾನ (ಸಾಮಾಜಿಕ ಅರಣ್ಯ, ಪ್ರಾದೇಶಿಕ ಅರಣ್ಯ, ಇತರ ಅರಣ್ಯ ಹಾಗೂ ಅರಣ್ಯ ತರಬೇತಿ ಕೇಂದ್ರಕ್ಕೆ) ಬಿಡುಗಡೆ ಮಾಡಲಾಗಿದೆ ; (ತಾಲ್ಲೂಕುವಾರು, ವರ್ಷವಾರು ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಮೇಲಿನ ವಿವಿಧ ಯೋಜನೆಗೆ ಮತ್ತು ಯಾವ ಯಾವ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಹಣ ಮಂಜೂರಾತಿ ನೀಡಲಾಗಿದೆ ; (ಯೋಜನೆವಾರು, ತಾಲ್ಲೂಕುವಾರು, ವರ್ಷವಾರು ಪೂರ್ಣ ವಿವರ ನೀಡುವುದು)

(ಇ) ಈ ಪ್ರದೇಶದಲ್ಲಿ ಸದರಿ ಅನುದಾನದಲ್ಲಿ ಎಷ್ಟು ಹೆಕ್ಟೇರು ಮತ್ತು ಅರಣ್ಯ ಪ್ರದೇಶವನ್ನು ಅಭಿವೃದ್ಧಿಗೊಳಿಸಲಾಗಿದೆ ಹಾಗೂ ಕೈಗೆದುಕೊಂಡ ಕಾಮಗಾರಿಗಳು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಯಾಗಿದೆಯೇ ; ಅಥವಾ ಅಪೂರ್ಣವಾಗಿದೆಯೇ ; ಹಾಗಿದ್ದಲ್ಲಿ, ಕಾರಣಗಳೇನು ? (ವರ್ಷವಾರು ತಾಲ್ಲೂಕುವಾರು, ಯೋಜನೆವಾರು ಲೆಕ್ಕ ಶೀರ್ಷಿಕೆವಾರು ಪೂರ್ಣ ವಿವರ ನೀಡುವುದು)

## ಬೆಳಗಾವಿ ಜಿಲ್ಲೆಯ ನೀರಾವರಿ ಯೋಜನೆಗಳು

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫ (೫೧೯) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಜಿಲ್ಲೆಯಲ್ಲಿ ಪೂರ್ಣಗೊಂಡಿರುವ ಒಟ್ಟು ನೀರಾವರಿ ಯೋಜನೆಗಳೆಷ್ಟು ; ಈ ಯೋಜನೆಗಳಿಂದ ಎಷ್ಟು ಸಾವಿರ ಎಕರೆ ನೀರಾವರಿಯಾಗುತ್ತಿದೆ ;

(ಆ) ಈ ಯೋಜನೆಗಳಿಗೆ ಖರ್ಚಾದ ಹಣವೆಷ್ಟು ;

(ಇ) ಬೆಳಗಾವಿ ಜಿಲ್ಲೆಯಲ್ಲಿ ಅಪೂರ್ಣವಾಗಿರುವ ನೀರಾವರಿ ಯೋಜನೆಗಳಾವುವು ; ಇಲ್ಲಿಯವರೆಗೆ ಈ ಯೋಜನೆಗಳಿಗೆ ಖರ್ಚಾಗಿರುವ ಹಣವೆಷ್ಟು ;

ಈ) ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಅನುದಾನವೆಷ್ಟು ; ಈ ಯೋಜನೆಗಳಿಂದ ಎಷ್ಟು ಹೆಕ್ಟೇರ್ ಭೂಮಿ ನೀರಾವರಿಯಾಗುತ್ತದೆ ?

## ತುಂಗಭದ್ರಾ ಜಲಾಶಯದಲ್ಲಿರುವ ಹೂಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೧೬ (೫೪೮) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತುಂಗಭದ್ರಾ ಜಲಾಶಯದಲ್ಲಿ ಪ್ರತಿ ವರ್ಷ ತುಂಬುತ್ತಿರುವ ಹೂಳಿನ ಅಂದಾಜು ಪ್ರಮಾಣವೇನು ;

(ಆ) ಈಗಾಗಲೇ ಜಲಾಶಯದಲ್ಲಿ ತುಂಬಿರುವ ಹೂಳಿನ ಪ್ರಮಾಣವೇನು ;

(ಇ) ಪ್ರಸ್ತುತ ನೀರಿನ ಸಂಗ್ರಹದ ಸಾಮರ್ಥ್ಯವೇನು ; ಪ್ರಾರಂಭದಲ್ಲಿದ್ದ ನೀರಿನ ಸಂಗ್ರಹದ ಸಾಮರ್ಥ್ಯವೆಷ್ಟು ?

## ಬೆಳಗಾವಿಯಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ಕೆ.ಎ.ಟಿ.) ಕಚೇರಿ ಪ್ರಾರಂಭಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೧೭ (೪೯೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿಯಲ್ಲಿ ಕಂದಾಯ ಇಲಾಖೆಯ ಡಿವಿಜನಲ್ ಹೆಡ್ ಕ್ವಾರ್ಟರ್ಸ್ ಇರುವ ಸಂಗತಿ ನಿಜವೇ ;

(ಆ) ಬೆಳಗಾವಿಯಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿ (KAT) ವ್ಯಾಪ್ತಿಗೆ ಒಳಪಡುವ ಸಾಕಷ್ಟು ಕೇಸುಗಳು ಇದ್ದು, ಇಲ್ಲಿ KAT ಕಛೇರಿ ಪ್ರಾರಂಭಿಸಲು ಎಲ್ಲಾ ಮೂಲಭೂತ ಸೌಕರ್ಯ ಇರುವುದರಿಂದ ಇಲ್ಲಿ KAT ಕಛೇರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ರಾಜ್ಯದಲ್ಲಿ ಎಷ್ಟು KAT ಕೇಸುಗಳು KAT ಕೋರ್ಟಿನಲ್ಲಿ ಬಾಕಿ ಇರುತ್ತವೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಹಾಸನದ ರೈತರ ಭೂಸ್ವಾಧೀನ ಆತಂಕದ ಸಮಸ್ಯೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೮ (೫೨೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿ ವ್ಯಾಪ್ತಿಯಲ್ಲಿನ ಎಷ್ಟು ಜಮೀನನ್ನು ಎಷ್ಟು ಜನ ರೈತರಿಗೆ ಸಾಗುವಳಿ ಪತ್ರ ನೀಡಲಾಗಿದೆ ;

(ಆ) ಸದರಿ ಜಮೀನನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿ ಸಾಗುವಳಿ ಪತ್ರ ನೀಡಿದ ನಂತರ ಈ ಜಮೀನನ್ನು ಈಗ ವಶಪಡಿಸಿಕೊಳ್ಳಲು ಕಾರಣವೇನು ;

(ಇ) ಈ ಭೂಮಿಯ ಮೇಲೆ ಅವಲಂಬಿತರಾಗಿರುವ ರೈತರ ಹಿತದೃಷ್ಟಿಯಿಂದ ಸರ್ಕಾರವೇ ನೀಡಿರುವ ಜಮೀನನ್ನು ವಶಪಡಿಸಿಕೊಳ್ಳುವುದನ್ನು ಕೈಬಿಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬೆಳಗಾವಿ ಜಿಲ್ಲೆಯ ಧೂದಗಂಗಾ ಯೋಜನೆಯಡಿ

## ಕಾಳಮ್ಮವಾಡಿ ಎಡದಂಡೆ ಕಾಲುವೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯ (೫೨೭+೫೨೮) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಜಿಲ್ಲೆಯ ಧೂದಗಂಗಾ ಯೋಜನಾ ವ್ಯಾಪ್ತಿಯ ಕಾಳಮ್ಮವಾಡಿ ಎಡದಂಡೆ ಕಾಲುವೆಯನ್ನು ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳೇನು ;

(ಆ) ಸದರಿ ಕಾಲುವೆ ನಿರ್ಮಾಣದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ಸರ್ಕಾರದ ಪಾತ್ರವೆಷ್ಟು ;

(ಇ) ಒಂದು ವೇಳೆ ಮಹಾರಾಷ್ಟ್ರ ಸರ್ಕಾರಕ್ಕೆ ಕಾಲುವೆ ನಿರ್ಮಿಸಲು ಆಸಕ್ತಿ ಇದ್ದರೆ ಕಾಲುವೆ ನಿರ್ಮಿಸಲು ಅದಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ಒತ್ತಡ ಹೇರಲಾಗಿದೆಯೇ ;

ಈ) ನಮ್ಮ ರಾಜ್ಯ ವ್ಯಾಪ್ತಿಯಲ್ಲಿರುವ ಈ ನದಿ ನೀರನ್ನು ಸದ್ಬಳಕೆ ಮಾಡಲು ಕಾಲುವೆ ನಿರ್ಮಾಣ ವಿಳಂಬಗೊಳ್ಳಲು ಕಾರಣ ಏನು ;

ಉ) ಇದನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವಲ್ಲಿ ಸರ್ಕಾರದ ಕ್ರಮವೇನು ?

## ಶಿಂಷಾ ನದಿ ಎಡದಂಡೆಯಲ್ಲಿ ಬರುವ ಕೆರೆಗಳಿಗೆ ನೀರು

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦ (೫೦೯) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿಂಷಾ ನದಿಯ ಎಡಭಾಗದಲ್ಲಿ ಬರುವ ಕೆರೆಗಳಿಗೆ ನೀರನ್ನು ಹಂತ ಹಂತವಾಗಿ ತುಂಬಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದು, ಈಗ ಇದು ಯಾವ ಹಂತದಲ್ಲಿದೆ ;

(ಆ) ಆದರೆ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಕೆರೆಗಳನ್ನು ತುಂಬಿಸಲು ಸರ್ಕಾರ ಕೈಗೊಂಡ ಕ್ರಮವೇನು ? (ಪೂರ್ಣ ಮಾಹಿತಿ ನೀಡುವುದು)

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ. 274 ಪ್ರತಿಗಳು – 1000 – ಪಿ8